# **ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ**

## **(ಸಂಚಾರಿ ನ್ಯಾಯಾಲಯ, ಅಜ್ಜಂಪುರ)**

**ಸಿ.ಸಿ.ನಂಃ 1951/2023**

**ಫಿರ್ಯಾದುದಾರರುಃ** ಸರ್ಕಾರದ ಪರವಾಗಿ ಅಜ್ಜಂಪುರ ಪೊಲೀಸರು

**-: ವಿರುದ್ಧ :-**

**ಆರೋಪಿಃ**

1. ಶ್ರೀ ಗಿರೀಶ.ವಿ,
ಬಿನ್ ಶ್ರೀ ವೆಂಕಟೇಶಪ್ಪ,
27 ವರ್ಷಗಳು,

2. ಶ್ರೀಮತಿ ಯಲ್ಲಮ್ಮ,
ಕೋಂ ಶ್ರೀ ವೆಂಕಟೇಶಪ್ಪ,
46 ವರ್ಷ,

3. ಶ್ರೀಮತಿ ಸ್ವಾತಿ,
ಕೋಂ ಶ್ರೀ ಗಿರೀಶ್.ವಿ,
19 ವರ್ಷ,

ಎಲ್ಲರ ವಾಸಃ ಗಡಿರಂಗಾಪುರ ಗ್ರಾಮ,
ಶಿವನಿ ಹೋಬಳಿ,
ಅಜ್ಜಂಪುರ ತಾಲ್ಲೂಕು.

## **ದೋಷಾರೋಪಣೆ**

ಶ್ರೀ. ರಾಹುಲ್ ಶೆಟ್ಟಿಗಾರ್, ಬಿ.ಕಾಂ.(Hons.), ಎಲ್‌ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 09.09.2023 ರಂದು ಬೆಳಿಗ್ಗೆ 9.30 ಗಂಟೆಗೆ ಅಜ್ಜಂಪುರ ಪೋಲೀಸ್ ಠಾಣಾ ಸರಹದ್ದಿನ ಗಡಿರಂಗಾಪುರ ಗ್ರಾಮದಲ್ಲಿ ಚಾಸಾ-1/ ಶ್ರೀಮತಿ ರತ್ನಮ್ಮ, ಚಾಸಾ-2/ ಶ್ರೀ ವೆಂಕಟೇಶಪ್ಪ, ಚಾಸಾ-3/ ಶ್ರೀ ರಂಗಸ್ವಾಮಿ.ಅರ್.ವಿ ರವರು ತಮ್ಮ ಮನೆಯ ಮುಂದಿನ ಅಸೆಸ್ಮೆಂಟ್ ನಂ.108 ರ ನಿವೇಶನದಲ್ಲಿ ನಿಂತಿರುವಾಗ 1 ರಿಂದ 3 ನೇ ಆರೋಪಿತರಾದ ನೀವುಗಳು ಚಾಸಾ-1 ರವರ ಮನೆಯ ಮುಂದಿನ ನಿವೇಶನದ ಬಳಿ ಬಂದಿದ್ದು, ಆಗ ಚಾಸಾ-1 ರವರು ಆರೋಪಿಗಳಾದ ನಿಮ್ಮನ್ನು ಉದ್ದೇಶಿಸಿ ನೀವುಗಳು ವಾಸವಾಗಿರುವ ಮನೆ ಮತ್ತು ಪಕ್ಕದಲ್ಲಿರುವ

ಖಾಲಿ ನಿವೇಶನ ನಮಗೆ ಸೇರಬೇಕು ಇದನ್ನು ಬಿಟ್ಟು ನೀವು ಬೇರೆ ಕಡೆ ಹೊಸದಾಗಿ ಮಾಡಿಕೊಳ್ಳಿ ಎಂದು ಹೇಳಿದಕ್ಕೆ 1 ರಿಂದ 3 ನೇ ಆರೋಪಿಗಳಾದ ನೀವು ಅಪರಾಧವನ್ನು ಮಾಡುವ ಸಮಾನ ಉದ್ದೇಶದಿಂದ ಚಾಸಾ-1 ರವರ ಶಾಂತಿಭಂಗ ಮಾಡುವ ಉದ್ದೇಶದಿಂದ ಅವರಿಗೆ ಬಾಯಿಗೆ ಬಂದಂತೆ ಬೋಳಿಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನಿಸಿರುತ್ತೀರಿ. ಈ ರೀತ್ಯ 1 ರಿಂದ 3 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 3 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, ನಿಮ್ಮಲ್ಲಿ 2 ನೇ ಆರೋಪಿ ಚಾಸಾ-1 ರವರ ತಲೆಕೂದಲು ಹಿಡಿದು ಎಳೆದಾಡಿ ಕೈಯಿಂದ ಮೈಕೈಗೆ ಗುದಿರುತ್ತೀರಿ, ನಿಮ್ಮಲ್ಲಿ 3 ನೆ ಆರೋಪಿ ಚಾಸಾ-1 ರವರಿಗೆ ಕೈಯಿಂದ ಹೊಡೆದಿರುತ್ತೀರಿ ಮತ್ತು ಅವರಿಗೆ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಈ ರೀತ್ಯ 1 ರಿಂದ 3 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 3 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, ನಿಮ್ಮಲ್ಲಿ 2 ನೇ ಆರೋಪಿ ಚಾಸಾ-1 ರವರಿಗೆ ಕಲ್ಲಿನಿಂದ ಎಡಕಾಲಿನ ಮೊಣಕಾಲಿನ ಹತ್ತಿರ, ಎದೆಗೆ ಹಾಗೂ ಮೈಕೈಗೆ ಹಾಗೂ ಗಲಾಟೆ ಬಿಡಿಸಲು ಬಂದ ಚಾಸಾ-2 ರವರಿಗೆ ಎಡಮಟ್ಟೆಯಿಂದ ಎದೆಗೆ ಮತ್ತು ಮೈಕೈಗೆ ಹೊಡೆದಿರುತ್ತೀರಿ ಮತ್ತು ನಿಮ್ಮಲ್ಲಿ 1 ನೇ ಆರೋಪಿ ಎಡಮಟ್ಟೆಯಿಂದ ಚಾಸಾ-2 ರವರ ಮೈಕೈಗೆ ಬೆನ್ನಿಗೆ ಹೊಡೆದಿರುತ್ತೀರಿ ಮತ್ತು ಅವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯ 1 ರಿಂದ 3 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 3 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, 1 ರಿಂದ 3 ನೇ ಆರೋಪಿಗಳಾದ ನೀವು ಅಜ್ಜಂಪುರ ಠಾಣೆಗೆ ಹೋಗಿ ದೂರು ನೀಡಿದರೆ ನಿಮ್ಮನ್ನು ಕೊಲೆ ಮಾಡುತ್ತೇವೆಂದು ಕೊಲೆ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯ 1 ರಿಂದ 3 ನೇ ಆರೋಪಿಗಳಾದ ನೀವು

ಭಾರತ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಸದರಿ ಮೇಲ್ಕಂಡ 1 ರಿಂದ 3 ನೇ ಆರೋಪಿಗಳಾದ ನೀವು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮೇಲೆ ಹೇಳಿದ ಅಪರಾದಗಳನ್ನು ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದೆಂದು ಆದೇಶಿಸಲಾಗಿದೆ.

ಪ್ರಃ1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದಿರಾ? ಅವುಗಳು ನಿಮಗೆ ಅರ್ಥವಾಯಿತೇ?

ಆರೋಪಿಗಳ ಉತ್ತರಃ

ಆರೋಪಿ 1: Yes

ಆರೋಪಿ 2: Yes

ಆರೋಪಿ 3: Yes

ಪ್ರಃ2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಗಳ ಉತ್ತರಃ

ಆರೋಪಿ 1: Pleaded not guilty and claimed to be tried

ಆರೋಪಿ 2: Pleaded not guilty and claimed to be tried

ಆರೋಪಿ 3: Pleaded not guilty and claimed to be tried

(ಆರೋಪಿತರಿಗೆ ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣಿಕರಿಸುತ್ತೇನೆ)

ದಿನಾಂಕ : 13.06.2025

ಸಹಿ/-
(ರಾಹುಲ್ ಶೆಟ್ಟಿಗಾರ್)
ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾದಂ., ತರೀಕೆರೆ.
(ಸಂಚಾರಿ ನ್ಯಾಯಾಲಯ, ಅಜ್ಜಂಪುರ)

ಆರೋಪಿತರ ಸಹಿಃ